1	2	3
MYSORE DISTRICT		9,680
44.	Sri Meenakshi Sundaram Textiles Ltd., Hunsur, Mysore District	12,376
45.	Sujatha Textiles Mills, Nanjangud, Mysore Dist	27,984
46.	Velan Textiles (P) Ltd., Chamarajanagar, Mysore Dist	12,544
47.	Vishnu Textiles, Periyapatna, Mysore District	9,680
48.	Mari Spinners(P) Ltd., Mysore	17,616
49.	Sridevi Textiles (P) Ltd., Mysore, Mysore District	8,208
50.	Pasari Spinning Mills, Nanjangud, Mysore District	6,000
		10,90,267

ಪರಿಶಿಷ್ಟರ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ.

538 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪರಿಶಿಷ್ಟರ ಸ್ಥಿತಿಗಳ ಬಗ್ಗೆ ಸಮೀಕ್ಷೆಯನ್ನು ಸರ್ಕಾರ ನಡೆಸಿದೆಯೆ? ಸಮೀಕ್ಷೆ ಯಾವಾಗ ಪ್ರಾರಂಭಿಸಲಾಯಿತು? ಯಾವಾಗ ಅಂತ್ಯಗೊಂಡಿದೆ?*

ಆ) *ಸಮೀಕ್ಷೆ ಕಾರ್ಯಕ್ಕೆ ಸರ್ಕಾರದಿಂದ ಖರ್ಚು ಮಾಡಿರುವ ಹಣ ಎಷ್ಟು? ಸಮೀಕ್ಷಾ ಕಾರ್ಯದ ಉದ್ದೇಶವೇನು?*

ಇ) *ಬಡ ದಲಿತ ಕುಟುಂಬ ವರ್ಗದಲ್ಲಿ ಮೃತ ಪಟ್ಟರೆ ಶವ ಸಂಸ್ಕಾರಕ್ಕಾಗಿ 1000-00 ರೂಪಾಯಿ ಸರ್ಕಾರ ನೀಡಲು ನಿರ್ಧರಿಸಿದೆಯೇ? ಹಾಗಿದ್ದಲಿಲ್ಲ ಈವರೆಗೆ ಎಷ್ಟು ಪ್ರಕರಣದಲ್ಲಿ ಈ ರೀತಿ ಸಹಾಯಧನ ನೀಡಲಾಗಿದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರ ಡಾ।। ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ಮೂಲಕ ಪ.ಜಾತಿ : ಪ.ವರ್ಗಗಳ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆಯನ್ನು ಅಕ್ಟೋಬರ್-2, 1995 ರಿಂದಲೇ ಎಲ್ಲಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರಾರಂಭಿಸಿದೆ. ಈ ಸಮೀಕ್ಷೆಯ ಕಾರ್ಯವು ಬಹುತೇಕ ಜಿಲ್ಲೆಗಳಲ್ಲಿ ಶೇಕಡ90ರಷ್ಟು ಪೂರ್ಣಗೊಂಡಿರುತ್ತದೆ. ಸದ್ಯದಲ್ಲಿಯೇ ಪೂರ್ಣ ಸಮೀಕ್ಷೆಯ ಕಾರ್ಯವು ಮುಕ್ತಾಯಗೊಳ್ಳಲಿದೆ.

ಆ) ಈ ಸಮೀಕ್ಷೆಯ ಕಾರ್ಯಕ್ಕಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಇದುವರೆಗೆ 46,49,852 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಸಮೀಕ್ಷಾ ವರದಿಯ ಆಧಾರದ ಮೇಲೆ ಈಗಿರುವ ಕೆಲವು ಯೋಜನೆಗಳನ್ನು ಮಾರ್ಪಡಿಸುವುದಲ್ಲದೆ ಹೆಚ್ಚಿನ ಅಭಿವೃದ್ಧಿಗೊಸ್ಕರ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ಇ) ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಜನರ ಶವ ಸಂಸ್ಕಾರಕ್ಕಾಗಿ 1000-00 ರೂಪಾಯಿಗಳನ್ನು ಮಹಾನಗರಪಾಲಿಕೆ, ಪುರಸಭೆ ಮತ್ತು ನಗರಸಭೆಗಳ ಶೇಕಡ 18ರ ಹಣದಲ್ಲಿ ನೀಡಲು ಸರ್ಕಾರವು ಆದೇಶಿಸಿ, ದಿನಾಂಕ 16-12-95ರಲ್ಲಿ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳು, ಆಯುಕ್ತರು, ಮಹಾನಗರಪಾಲಿಕೆ, ನಗರಸಭೆ, ಪುರಸಭೆಗಳಿಗೆ ಮತ್ತು ಪಂಚಾಯತ್‌ಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ. ಈ ಸರ್ಕಾರದ ಸುತ್ತೋಲೆಯನ್ನು ಇತ್ತೀಚೆಗೆ ಕಳುಹಿಸಿರುವುದರಿಂದ ಈ ಬಗ್ಗೆ ನೀಡಲಾದ ಹಣದ ವಿವರ ಇದುವರೆಗೆ ವರದಿಯಾಗಿರುವುದಿಲ್ಲ.

ಆಶ್ರಯ ಯೋಜನೆಯಲ್ಲಿ ಆದ ಅವ್ಯವಹಾರಗಳಿಗೆ ತನಿಖೆ

539 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ತನಿಕೆ ನಡೆಸಿದ ಸಿ.ಓ.ಡಿ.ಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ?

ಆ) ಹಾಗಿದ್ದಲ್ಲಿ, ಆರೋಪಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಸಿ.ಓ.ಡಿ. ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ದಿನಾಂಕ 28-2-94 ರಂದು ಸಲ್ಲಿಸಿದೆ. ಆದರೆ, ಸಿ.ಓ.ಡಿ. ಯಿಂದ ಇನ್ನೂ ಅಂತಿಮ ವರದಿಯು ಬಂದಿರುವುದಿಲ್ಲ.

ಆ) ಸಂಬಂಧಪಟ್ಟ ಅಧಿಕಾರಿಗಳನ್ನು ಆಶ್ರಯ ಅವ್ಯವಹಾರಗಳಲ್ಲಿ ತೊಡಗಿದ್ದವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಆರೋಪಿಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ವಸತಿ ಹೀನರಿಗೆ ಮನೆ ಮಂಜೂರಾತಿ

541 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ 1995ನೇ ಸಾಲಿನ ಸಮೀಕ್ಷೆ ಪ್ರಕಾರ ನಿವೇಶನ ಮತ್ತು ವಸತಿ ಹೀನರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು).